ಎಸ್. ಮರ್ಷಾಕ್

ಮೃಗಾಲಯದ ಮಕ್ಕಳು

ಎಸ್. ಮರ್ಷಾಕ್

ಮೃಗಾಲಯದ ಮಕ್ಕಳು

ರಾದುಗ ಪ್ರಕಾಶನ
ಮಾಸ್ಕೋ

ನವಕರ್ನಾಟಕ ಪಬ್ಲಿಕೇಷನ್ಸ್ ಪ್ರೈ.ಲಿ.
ಬೆಂಗಳೂರು

ಆನೆ

ನೀಡಲು ಆನೆಗೆ ಬೂಟುಗಳ,
ಆಯಿತದಕೆ ಅತ್ಯಾನಂದ.
ಹಾಕಿ ಕೊಳ್ಳಲದನೆತ್ತಿಸುತ
ಮರುಕದಿ ಹೇಳಿತು ಆನೆಮರಿ:
ನನಗೆ ದೊಡ್ಡವು ಬೇಕು
ಎರಡಲ್ಲ ನಾಲ್ಕು!

ಜಿರಾಫೆ

ಹೂವು ಕೀಳುವುದು ಸುಲಭ, ಸರಳ
– ಚಿಕ್ಕದಾಗಿರೆ ಎತ್ತರ.
ಉದ್ದವಿರೆ ಕತ್ತು ನಮ್ಮಷ್ಟು
ಕಷ್ಟವಲ್ಲವೆ ಹೂವು ಕೀಳುವುದು !

ಹುಲಿಯ ಮರಿ

ಏಯ್, ಸನಿಹದಲಿ ನಿಲ್ಲದಿರಿ.
ಬೆಕ್ಕಿನ ಮರಿಯಲ್ಲ – ನಾನು ಹುಲಿಯ ಮರಿ!

ಪೆನ್‌ಗ್ವಿನ್ ಮರಿಗಳು

ನಾವು – ಸೋದರರರು ಅವಳಿ ಜವಳಿ
ಬಂದಿಹೆವು ಈಗಷ್ಟೆ ಮೊಟ್ಟೆಯೊಡೆದು.
ಎಲ್ಲಿ ನಮ್ಮಯ ಅಮ್ಮ – ಹಕ್ಕಿಯೇ ಅವಳು?
ಎಲ್ಲಿ ಅವಳನು ನಾವು ಹುಡುಕಬಹುದು?

ತಿಳಿದಿಲ್ಲ ನಾವಿಲ್ಲಿ ಯಾರನ್ನೂ,
ತಿಳಿದಿಲ್ಲ ನಾವು ನಾವೆ ಯಾರೆಂದು.
ಬಾತುಕೋಳಿಗಳೆ, ಕ್ರೇನು ಹಕ್ಕಿಗಳೆ ನಾವು?
ಗೊತ್ತಾಯಿತೀಗ ನಮಗೆ – ನಾವು ಪೆನ್‌ಗ್ವಿನ್ ಮರಿಗಳು.

ಕೋತಿ ಮರಿ

ಆಫ್ರಿಕಾದಿಂದ ನಾವಿಕನೊಬ್ಬ
ಹೊರಟನು ಯಾನ ಕಡಲಿನ ಮೇಲೆ.
ಕೋತಿಯ ಮರಿಯೊಂದ
ಚೀಲದಿ ಅವ ತಂದ.

ತವರೂರಿನ ನೆನಪು ಕೋತಿಯ ಮರಿಗೆ,
ಆಟಪಾಟಗಳು ನೆನಗುದಿಗೆ.
ಬೆಳಗಾಗುತಲೆ ಕುಡಿಯುತಿದೆ
ರುಚಿ ಇರದೀ ಮೀನಿನ ಎಣ್ಣೆ.

ಜೀಬ್ರಗಳು

ಪಟ್ಟೆ ಪಟ್ಟೆಯ ಕುದುರೆ,
ಆಫ್ರಿಕಾದ ಕುದುರೆ.
ಚೆನ್ನಾಗಿ ಆಡುವಿರಿ ಕಣ್ಣಾಮುಚ್ಚಾಲೆ
ಹುಲ್ಲುಗಾವಲಿನಲ್ಲಿ ಹುಲ್ಲುಗಳ ಮಧ್ಯೆ!

ಕಾಪಿ ಪುಸ್ತಕದಂತೆ
ಮೈ ತುಂಬ ಗೆರೆ ಇದಕೆ,
ಅಡಿಯಿಂದ ಮುಡಿಯವರೆಗೆ
ಬಣ್ಣ ಪಟ್ಟೆಯ ಕುದುರೆ!

ಆನೆ ಮರಿ

ಆಫ್ರಿಕಾದ ಮರಿ ಆನೆ
ನೀರಿನಲಿ ಚೆಲ್ಲಾಟ ಬಲು ಮೋಜು ಇದಕೆ.

ತೊಳೆಯಿತು ತಲೆಯನು ಕಿವಿಗಳನೂ
ಉಳಿಯಿತು ತೊಟ್ಟಿ ಬರಿದಾಗಿ !

ಒಳ್ಳೆಯ ಆನೆಗೆ ಮೈ ತೊಳೆಯೆ
ಬೇಕದಕೊಂದು ಇಡೀ ಹೊಳೆಯೇ !

ಒಯ್ಯಿರಿ ಅತ್ತ
ತೊಟ್ಟಿಯನು
ತನ್ನಿರಿ ಇತ್ತ
ನೀರಿನ ಬುಗ್ಗೆಯನು !

ಸಿಂಹದ ಮರಿಗಳು

ಅರಿಯಿರಾ ನೀವು ಅಪ್ಪನನು –
ದೊಡ್ಡ ಎಣ್ಣೆಗೆಂಪಿನಾ ಸಿಂಹವನು ?
ಅವನಿಗೆ ಉಂಟು ಭಾರಿ ಪಂಜಗಳು,
ಕೊರಳಿನ ಸುತ್ತ ಕೇಸರವೂ.

ಅವನ ಗರ್ಜನೆಯೆ ಗುಡುಗಿನ ಮೊಳಗು,
ಕೇಳಬಹುದದನು ದೂರ ದೂರ.
ಅವನಿಗೆ ಊಟಕೆ ಮಾಂಸವೇ ಬೇಕು.
ನಮಗೋ ಶೀಶೆಯ ಹಾಲೇ ಸಾಕು !

ಒಂಟೆ

ಬಡಪಾಯಿ ಒಂಟೆ ಮರಿ.
ಹಸಿವದಕೆ ಅಪಾರ –
ಸಿಗುತಿಲ್ಲವದಕೆ ಸಾಕಷ್ಟು ಆಹಾರ.

ಇಂದು ಬೆಳಗಿಂದ ಅದು ತಿಂದುದೆಲ್ಲ
ಎರಡು ಬಕೆಟ್ ತಿನಿಸಷ್ಟೆ
ತುಂಬಲಿಲ್ಲ ಅದರ ಹೊಟ್ಟೆ !

ಬಿಳಿ ಕರಡಿಗಳು

ನಮಗಿಹುದು ದೊಡ್ಡ ಕೊಳ,
ಈಜುವೆವು ನಾವು ಸೋದರರು ಜೊತೆಗೂಡಿ.

ಆಹ್ಲಾದಕರವಾದ ತಣ್ಣಗಿನ ನೀರು,
ದಿನದಿನವು ಬದಲಿಸುವರಿದನು ಅವರು.

ಈಜುವೆವು ನಾವು ಬದಿಯಿಂದ ಬದಿಗೆ
ಬೆನ್ನ ಮೇಲೊಮ್ಮೆ, ನೇರವಾಗೊಮ್ಮೆ.

ಬಲಗಡೆಯೆ ಹೋಗೋ, ತಮ್ಮ,
ಕಾಲಿನಲಿ ತಳ್ಳದಿರು ನನ್ನ !

ಬೆಂಕಿಕೋಳಿಯ ಮರಿ

ನಾನೊಂದು ಮರಿ ಬೆಂಕಿಕೋಳಿ.
ನನಗಿಹುದು ಬಲುಶಕ್ತಿ, ನಾನೊಂದು ಜಂಬದಾಕೋಳಿ.
ಕೋಪಗೊಂಡಾಗ ನಾನು ಕುಟ್ಟುವೆನು ಕಾಲು –
ಮುಳ್ಳುಮುಳ್ಳಾದ ಗಡುಸಾದ ಕಾಲು.

ಹೆದರಿದಾಗ ನಾನೋಡುವೆ ವೇಗದಿ
ಉದ್ದನೆ ಕತ್ತನು ಮುಂಚಾಚಿ.
ಆದರೆ ನೋಡಿ, ಹಾರಲಾರೆ ನಾನು.
ಮತ್ತೆ ಬರದು ನನಗೆ ಹಾಡುವುದೂ.

ಕಾಂಗರೂ

ನೋಡಿ, ನಲಿಯುತಿವೆ ಆಟದಲ್ಲಿ
ಆಸ್ಟ್ರೇಲಿಯಾದ ಕಾಂಗರೂ ಎರಡು.

ಆಡುತಿವೆ ಅವು ಕಪ್ಪೆಕುಪ್ಪಳ ಆಟ.
ಮೃಗಾಲಯದ ಉದ್ಯಾನದಲ್ಲಿ.

ಬಾತುಕೋಳಿ ಮರಿ

ನೀರು ಸುರಿಯುತಿದೆ ಏಕೆ
ಈ ಮರಿ ಬಾತುಕೋಳಿಯಿಂದ ?
ಈಗಷ್ಟೆ ಬಂದಿಹುದು ಕೊಳದಿಂದ
ಒರಸಿಕೊಳ್ಳಲು ಕೊಡಿ ಅದಕೆ ಟವಲೊಂದ !

ಎಸ್ಕಿಮೋ ನಾಯಿ

ಬೋನಿನ ಮೇಲೆ ಬರಹವಿದೆ:
"ಹೋಗದಿರಿ ಹತ್ತಿರ!"

ನಂಬದಿರಿ ಈ ಬರಹವನು.
–ನಾನು ತುಂಬ ತುಂಬ ಸಾಧು.

ಕುಳಿತಿಹೆನೇಕೆ ಬೋನಿನಲಿ
ತಿಳಿಯೆನು ನಾನೇ, ದಿಟದಲ್ಲಿ!

ಪೆನ್‌ಗ್ವಿನ್

ನಿಜವೇ, ಮಕ್ಕಳೇ, ನಾನಂದವೇ ಹೇಳಿ?
ನಾನಿರುವೆನಲ್ಲವೇ ಗೋಣಿಚೀಲದ ತೆರದಿ.

ಕಡಲಲ್ಲಿ ಕಳೆದ ಹಳೆ ದಿನಗಳಲ್ಲಿ
ಹಿಂದೆ ಹಾಕುತ್ತಿದ್ದೆ ಉಗಿಜಹಜುಗಳ ವೇಗದಲ್ಲಿ

ಈಗ ನಾನಿಲ್ಲಿ ಮೃಗಾಲಯದಲ್ಲಿ
ಈಜುತಿಹೆ ಮೆಲ್ಲಗೀ ಪುಟ್ಟ ಕೊಳದಲ್ಲಿ.

ಗೂಬೆ ಮರಿಗಳು

ನೋಡಿ ಈ ಪುಟ್ಟ ಗೂಬೆ ಮರಿಗಳನು,
ಕುಳಿತಿಹವು ಗುಂಪಾಗಿ ಮುದುಡಿಕೊಂಡು.

ನಿದ್ದೆ ಬಂದಾಗ –
ತಿನ್ನುವುದೆ ಕೆಲಸ ಅವಕೆ.
ತಿನ್ನತೊಡಗಿದಾಗ –
ನಿದ್ದೆಯೇ ಬರದು ಅವಕೆ.

ಮೃಗಾಲಯದಲ್ಲಿ ಗುಬ್ಬಚ್ಚಿ

"ಗುಬ್ಬಚ್ಚಿ, ಗುಬ್ಬಚ್ಚಿ, ಮಾಡಿದೆ ನೀನೂಟವನೆಲ್ಲಿ?"
"ಪ್ರಾಣಿಗಳೊಡನೆ ಮೃಗಾಲಯದಲ್ಲಿ."

ಮೊದಲು ತಿಂದ ನಾನು
ಸಿಂಹದ ತಟ್ಟೆಯಲುಳಿದುದನು.



ತಿಂದೆ ಇನ್ನಷ್ಟು ನರಿಯು ಬಳಿ,
ಕುಡಿದೆ ನೀರು ಕಡಲ್ಗುದುರೆ ಬಳಿ.

ಆನೆಯೊಡನೆ ತಿಂದೆ ಕೆಂಪುಮೂಲಂಗಿ.
ಕೊಕ್ಕರೆ ಕೊಟ್ಟಿತು ಕಾಳುಗಳ.

ಓಡಿದೆ ಘೇಂಡಾ ಮೃಗದೆಡೆಗೆ,
ತೌಡನು ತಿಂದೆನು ಒಂದಿಷ್ಟು.

ಆದರೆ ಬಾಚಿ ಹಲ್ಲುಗಳ ಮೊಸಳೆ
ನನ್ನನು
ನುಂಗಿ ಬಿಡಲಿದ್ದಿತಿನ್ನೇನು !

ಅನುವಾದ: ಕೆ. ಎಲ್. ಗೋಪಾಲಕೃಷ್ಣರಾವ್

ಚಿತ್ರಗಳು: ಎ. ಚರೂಷಿನ್

С. Маршак
ДЕТКИ В КЛЕТКЕ
На языке каннада

S. Marshak
BABIES OF THE ZOO
In Kannada

© ಕನ್ನಡ ಅನುವಾದ ಪ್ರಗತಿ ಪ್ರಕಾಶನ 1984
ಎರಡನೆಯ ಮುದ್ರಣ ರಾದುಗ ಪ್ರಕಾಶನ 1987
ಸೋವಿಯತ್ ಒಕ್ಕೂಟದಲ್ಲಿ ಮುದ್ರಿತವಾದುದು
ISBN 5-05-002161-8